For more job news visit : www.kpscvaani.com

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ

(ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ)

E-Mail:dudc_mnd@yahoo.co.in **Ph.No:08232-231111**

ಸಂಖ್ಯೆ:ಎಂಎಯುನ್(1)ವಿ.ವ.222/2021-22 ದಿನಾಂಕ:06-05-2022

-:ಅಧಿಸೂಚನೆ:-

ವಿಷಯ: ಕರ್ನಾಟಕ ಪುರಸಭೆಗಳ (ರಾಜ್ಯದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿನ) ಲೋಡರ್ಸ್ ಮತ್ತು ಕ್ಲೀನರ್ಸ್ ಗಳ ನೇಮಕಾತಿ (ವಿಶೇಷ) ನಿಯಮಗಳು-2021ರ ರೀತ್ಯಾ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: UDD/150/TMS/2017, ದಿನಾಂಕ:04-02-2022 & ತಿದ್ದುಪಡಿ ಆದೇಶ ದಿನಾಂಕ:19-02-2022.

2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ:25361/DMA/20/DGRP/18-19, ದಿ:18-03-2022.

3. ಕರ್ನಾಟಕ ಪುರಸಭೆಗಳ (ಅಧಿಕಾರಿ ಮತ್ತು ಸಿಬ್ಬಂದಿಗಳ ನೇಮಕಾತಿ) ನಿಯಮಗಳು-2010.

* * * * * * *

ಮಂಡ್ಯ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿ ಇರುವ **"ಲೋಡರ್ಸ್ ಮತ್ತು ಕ್ಲೀನರ್ಸ್"** ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಉಲ್ಲೇಖ(1) ಮತ್ತು (2)ರನ್ವಯ ಆದೇಶ ಹೊರಡಿಸಿದ್ದು, ಅದರಂತೆ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿದ್ದು, ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ಅರ್ಜಿಯ ನಮೂನೆಯಲ್ಲಿರುವ ಅರ್ಜಿದಾರರಿಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿದ ಅರ್ಜಿಯನ್ನು ಹಾಗೂ ಅರ್ಜಿಯ ಜೊತೆಗೆ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ದೃಢೀಕರಿಸಿದ ಪ್ರತಿಗಳನ್ನು ಲಗತ್ತಿಸಿ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆ, ಮಂಡ್ಯ ಕೊಠಡಿ ಸಂಖ್ಯೆ:21 ಈ ವಿಳಾಸಕ್ಕೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ:06-06-2022 ರಂದು ಸಂಜೆ 5:30 ಗಂಟೆಯೊಳಗೆ ಸಲ್ಲಿಸತಕ್ಕದ್ದು.

For more job news visit : www.kpscvaani.com

ವಿಶೇಷ ಸೂಚನೆ:

1. ಅರ್ಜಿಯನ್ನು ಕಡ್ಡಾಯವಾಗಿ ನಿಗಧಿತ ನಮೂನೆಯಲ್ಲಿಯೇ ಸಲ್ಲಿಸಬೇಕು.
2. ಅರ್ಜಿಯನ್ನು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಂದ ಅಥವಾ ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆ, ಮಂಡ್ಯ ಕಛೇರಿಯಿಂದ ಪಡೆದುಕೊಂಡು ಅರ್ಜಿ ಸಲ್ಲಿಸಬಹುದು.

ಕ್ರ.ಸಂ	ಹುದ್ದೆಯ ಹೆಸರು	ಕನಿಷ್ಠ ವಿದ್ಯಾರ್ಹತೆ/ಅರ್ಹತೆ	ವೇತನ ಶ್ರೇಣಿ
1	ಲೋಡರ್ಸ್ ಮತ್ತು ಕ್ಲೀನರ್ಸ್	1) ವಿದ್ಯಾರ್ಹತೆ ಅನ್ವಯಿಸುವುದಿಲ್ಲ 2) ಕನ್ನಡ ಮಾತನಾಡಲು ಗೊತ್ತಿರಬೇಕು. 3) ಲೋಡರ್ಸ್ ಮತ್ತು ಕ್ಲೀನರ್ಸ್ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಕ್ಷೇಮಾಭಿವೃದ್ಧಿ, ದಿನಗೂಲಿ, ಗುತ್ತಿಗೆ, ಸಮಾನ ಕೆಲಸಕ್ಕೆ ಸಮಾನ ವೇತನ, ಹೊರಗುತ್ತಿಗೆ, ನೌಕರರು ಮಾತ್ರ ಅರ್ಜಿ ಸಲ್ಲಿಸಬೇಕು. 4) ವಯೋಮಿತಿ ಕನಿಷ್ಠ 18, ಗರಿಷ್ಠ 55 ವರ್ಷಗಳು.	17000-28950

ಮಂಡ್ಯ ನಗರಸಭೆಯಲ್ಲಿ ಖಾಲಿ ಇರುವ 04 ಸಂಖ್ಯೆ ಲೋಡರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಮೀಸಲಾತಿ ವರ್ಗೀಕರಣ

ಕ್ರ.ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಪರಿಶಿಷ್ಟ ಪಂಗಡ	01	-	-	-	-	-	-	-	01
3	ಸಾಮಾನ್ಯ ಅರ್ಹತೆ	01	01	-	-	-	-	-	-	02
	ಒಟ್ಟು	03	01	-	-	-	-	-	-	04

ಮಂಡ್ಯ ನಗರಸಭೆಯಲ್ಲಿ ಖಾಲಿ ಇರುವ 02 ಸಂಖ್ಯೆ ಕ್ಲೀನರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಮೀಸಲಾತಿ ವರ್ಗೀಕರಣ

ಕ್ರ.ಸಂ	ಮೀಸಲಾತಿ ವರ್ಗೀಕರಣದ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಸಾಮಾನ್ಯ ಅರ್ಹತೆ	01	-	-	-	-	-	-	-	01
	ಒಟ್ಟು	02	-	-	-	-	-	-	-	02

For more job news visit : www.kpscvaani.com

ಮದ್ದೂರು ಪುರಸಭೆಯಲ್ಲಿ ಖಾಲಿ ಇರುವ 04 ಸಂಖ್ಯೆ ಲೋಡರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಮೀಸಲಾತಿ ವರ್ಗೀಕರಣ

ಕ್ರ.ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಪರಿಶಿಷ್ಟ ಪಂಗಡ	01	-	-	-	-	-	-	-	01
3	ಸಾಮಾನ್ಯ ಅರ್ಹತೆ	01	01	-	-	-	-	-	-	02
	ಒಟ್ಟು	03	01	-	-	-	-	-	-	04

ಮದ್ದೂರು ಪುರಸಭೆಯಲ್ಲಿ ಖಾಲಿ ಇರುವ 02 ಸಂಖ್ಯೆ ಕ್ಲೀನರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಸಾಮಾನ್ಯ ಅರ್ಹತೆ	01	-	-	-	-	-	-	-	01
	ಒಟ್ಟು	02	-	-	-	-	-	-	-	02

ಮಳವಳ್ಳಿ ಪುರಸಭೆಯಲ್ಲಿ ಖಾಲಿ ಇರುವ 06 ಸಂಖ್ಯೆ ಲೋಡರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಪರಿಶಿಷ್ಟ ಪಂಗಡ	01	-	-	-	-	-	-	-	01
3	ಪ್ರವರ್ಗ-1	01	-	-	-	-	-	-	-	01
4	ಸಾಮಾನ್ಯ ಅರ್ಹತೆ	01	01	01	-	-	-	-	-	03
	ಒಟ್ಟು	04	01	01	-	-	-	-	-	06

ಮಳವಳ್ಳಿ ಪುರಸಭೆಯಲ್ಲಿ ಖಾಲಿ ಇರುವ ೦೭ ಸಂಖ್ಯೆ ಕ್ಲೀನರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಸಾಮಾನ್ಯ ಅರ್ಹತೆ	01	-	-	-	-	-	-	-	01
	ಒಟ್ಟು	02	-	-	-	-	-	-	-	02

For more job news visit : www.kpscvaani.com

ಶ್ರೀರಂಗಪಟ್ಟಣ ಪುರಸಭೆಯಲ್ಲಿ ಖಾಲಿ ಇರುವ 05 ಸಂಖ್ಯೆ ಲೋಡರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು

ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಪರಿಶಿಷ್ಟ ಪಂಗಡ	01	-	-	-	-	-	-	-	01
3	ಪ್ರವರ್ಗ-1	01	-	-	-	-	-	-	-	01
4	ಸಾಮಾನ್ಯ ಅರ್ಹತೆ	01	01	-	-	-	-	-	-	02
	ಒಟ್ಟು	04	01	-	-	-	-	-	-	05

ಶ್ರೀರಂಗಪಟ್ಟಣ ಪುರಸಭೆಯಲ್ಲಿ ಖಾಲಿ ಇರುವ 02 ಸಂಖ್ಯೆ ಕ್ಲೀನರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು

ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಸಾಮಾನ್ಯ ಅರ್ಹತೆ	01	-	-	-	-	-	-	-	01
	ಒಟ್ಟು	02	-	-	-	-	-	-	-	02

ಕೆ.ಆರ್.ಪೇಟೆ, ಪುರಸಭೆಯಲ್ಲಿ ಖಾಲಿ ಇರುವ 08 ಸಂಖ್ಯೆ ಲೋಡರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊ ಳ್ಳಲು

ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಪರಿಶಿಷ್ಟ ಪಂಗಡ	01	-	-	-	-	-	-	-	01
3	ಪ್ರವರ್ಗ-1	01	-	-	-	-	-	-	-	01
4	ಪ್ರವರ್ಗ-ಎ	01	-	-	-	-	-	-	-	01
5	ಸಾಮಾನ್ಯ ಅರ್ಹತೆ	01	01	01	01	-	-	-	-	04
	ಒಟ್ಟು	05	01	01	01	-	-	-	-	08

ಕೆ.ಆರ್.ಪೇಟೆ ಪುರಸಭೆಯಲ್ಲಿ ಖಾಲಿ ಇರುವ 02 ಸಂಖ್ಯೆ ಕ್ಲೀನರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು

ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಸಾಮಾನ್ಯ ಅರ್ಹತೆ	01	-	-	-	-	-	-	-	01
	ಒಟ್ಟು	02	-	-	-	-	-	-	-	02

For more job news visit : www.kpscvaani.com

ಪಾಂಡವಪುರ, ಪುರಸಭೆಯಲ್ಲಿ ಖಾಲಿ ಇರುವ 07 ಸಂಖ್ಯೆ ಲೋಡರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊ ಳ್ಳಲು ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಪರಿಶಿಷ್ಟ ಪಂಗಡ	01	-	-	-	-	-	-	-	01
3	ಪ್ರವರ್ಗ-1	01	-	-	-	-	-	-	-	01
4	ಪ್ರವರ್ಗ-ಎ	01	-	-	-	-	-	-	-	01
5	ಸಾಮಾನ್ಯ ಅರ್ಹತೆ	01	01	01	-	-	-	-	-	03
	ಒಟ್ಟು	05	01	01	-	-	-	-	-	07

ಪಾಂಡವಪುರ, ಪುರಸಭೆಯಲ್ಲಿ ಖಾಲಿ ಇರುವ 02 ಸಂಖ್ಯೆ ಕ್ಲೀನರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊ ಳ್ಳಲು ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಸಾಮಾನ್ಯ ಅರ್ಹತೆ	01	-	-	-	-	-	-	-	01
	ಒಟ್ಟು	02	-	-	-	-	-	-	-	02

ನಾಗಮಂಗಲ, ಪುರಸಭೆಯಲ್ಲಿ ಖಾಲಿ ಇರುವ 07 ಸಂಖ್ಯೆ ಲೋಡರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊ ಳ್ಳಲು ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಪರಿಶಿಷ್ಟ ಪಂಗಡ	01	-	-	-	-	-	-	-	01
3	ಪ್ರವರ್ಗ-1	01	-	-	-	-	-	-	-	01
4	ಪ್ರವರ್ಗ-ಎ	01	-	-	-	-	-	-	-	01
5	ಸಾಮಾನ್ಯ ಅರ್ಹತೆ	01	01	01	-	-	-	-	-	03
	ಒಟ್ಟು	05	01	01	-	-	-	-	-	07

For more job news visit : www.kpscvaani.com

ನಾಗಮಂಗಲ, ಪುರಸಭೆಯಲ್ಲಿ ಖಾಲಿ ಇರುವ 02 ಸಂಖ್ಯೆ ಕ್ಲೀನರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊ ಳ್ಳಲು ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣದ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
2	ಸಾಮಾನ್ಯ ಅರ್ಹತೆ	01	-	-	-	-	-	-	-	01
	ಒಟ್ಟು	02	-	-	-	-	-	-	-	02

ಬೆಳ್ಳೂರು ಪಟ್ಟಣ ಪಂಚಾಯಿತಿಯಲ್ಲಿ ಖಾಲಿ ಇರುವ 01 ಸಂಖ್ಯೆ ಲೋಡರ್ಸ್ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲು ಮೀಸಲಾತಿ ವರ್ಗೀಕರಣ

ಕ್ರ. ಸಂ	ಮೀಸಲಾತಿ ವರ್ಗೀಕರಣದ	ಇತರೆ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿ ಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ತೃತೀಯ ಲಿಂಗ	ಒಟ್ಟು
1	ಪರಿಶಿಷ್ಟ ಜಾತಿ	01	-	-	-	-	-	-	-	01
	ಒಟ್ಟು	01	-	-	-	-	-	-	-	01

ನೇಮಕಾತಿ ವಿಧಾನ: ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:UDD/150/TMS/2017, ದಿನಾಂಕ:04-02-2022 & ತಿದ್ದುಪಡಿ ಆದೇಶ ದಿನಾಂಕ:19-02-2022ರ ನಿಯಮಗಳಂತೆ ಕರ್ನಾಟಕ ಪುರಸಭೆಗಳ (ರಾಜ್ಯದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿನ) ಲೋಡರ್ಸ್ ಮತ್ತು ಕ್ಲೀನರ್ಸ್ ಗಳ ನೇಮಕಾತಿ (ವಿಶೇಷ) ನಿಯಮಗಳು-2021ರ ರೀತ್ಯಾ ಅಭ್ಯರ್ಥಿಗಳ ಆಯ್ಕೆಯನ್ನು ಮಾಡಲಾಗುವುದು.

1) ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಅನ್ಯ ಸ್ಥಳೀಯ ಸಂಸ್ಥೆಯ ಅಭ್ಯರ್ಥಿಗಳು ಆಗಿರಬಾರದು.

2) ಲೋಡರ್ಸ್ ಮತ್ತು ಕ್ಲೀನರ್ಸ್ ಅಂದರೆ ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ, ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿ ಕನಿಷ್ಟ 2 ವರ್ಷ ಸೇವೆಯನ್ನು ಸಲ್ಲಿಸಿರಬೇಕು ಮತ್ತು ಈ ನಿಯಮಗಳು ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯ ನಿರ್ವಹಿಸುತ್ತಿರುವವರು.

3) ಕ್ಷೇಮಾಭಿವೃದ್ಧಿ ಅಂದರೆ, ಕರ್ನಾಟಕ ರಾಜ್ಯ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರ ರೀತ್ಯಾ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ್ ಮತ್ತು ಕ್ಲೀನರ್ಸ್.

4) ವಯೋಮಿತಿ (1) ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮಗಳು ಅಥವಾ ಕರ್ನಾಟಕ ಪುರಸಭೆ (ಅಧಿಕಾರಿ/ನೌಕರರ ನೇಮಕಾತಿ) ನಿಯಮಗಳು 2010ರ ನಿಯಮಗಳಲ್ಲಿ ಏನೇ ಹೇಳಿದ್ದರೂ, ಗರಿಷ್ಟ ವಯೋಮಿತಿ 55 ವರ್ಷಗಳು.

For more job news visit : www.kpscvaani.com

5) ಅಭ್ಯರ್ಥಿಯ ವಯಸ್ಸನ್ನು ಶೈಕ್ಷಣಿಕ ವಿದ್ಯಾರ್ಹತೆ ದಾಖಲಾತಿಗಳು/ಆಧಾರ್ ಕಾರ್ಡ್/ಪಡಿತರ ಚೀಟಿ/ ಮತದಾರರ ಗುರುತಿನ ಚೀಟಿ/ಜನ್ಮ ದಿನಾಂಕ ದೃಢೀಕರಣ ಪತ್ರ/ಶಾಲಾ ವರ್ಗಾವಣೆ ಪ್ರಮಾಣ ಪತ್ರ/ ದಾಖಲಾತಿಗಳನ್ನು ಆಧರಿಸಿ ನಿರ್ಧರಿಸಲಾಗುವುದು.

6) ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಹಾಲಿ ಕ್ಷೇಮಾಭಿವೃದ್ಧಿ/ದಿನಗೂಲಿ/ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ/ ಹೊರಗುತ್ತಿಗೆ ಆಧಾರದ ಮೇಲೆ 2 ವರ್ಷಕ್ಕಿಂತ ಕಡಿಮೆ ಇಲ್ಲದೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್ ಮತ್ತು ಕ್ಲೀನರ್ಸ್ ಗಳಿಗೆ ಆದ್ಯತೆ ನೀಡಲಾಗುವುದು.

7) ಕಡಿಮೆ ವರ್ಷ ಸೇವೆ ಸಲ್ಲಿಸಿರುವವರಿಗಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದವರಿಗೆ ಆದ್ಯತೆ ನೀಡಲಾವುದು.

8) ನೇಮಕಾತಿಯಲ್ಲಿನ ಆದ್ಯತೆಯನ್ನು ಕ್ಷೇಮಾಭಿವೃದ್ಧಿ/ದಿನಗೂಲಿ/ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ/ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ್ ಮತ್ತು ಕ್ಲೀನರ್ಸ್ ಗಳನ್ನು ಕ್ರಮವಾಗಿ ಪರಿಗಣಿಸಲಾಗುವುದು.

9) ಹೊರಗುತ್ತಿಗೆ ಲೋಡರ್ಸ್ ಮತ್ತು ಕ್ಲೀನರ್ಸ್ ಗಳಿಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾವತಿಸಲಾದ ಕಾರ್ಮಿಕರ ರಾಜ್ಯ ವಿಮೆ (ಇ.ಎಸ್.ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್), ಹಾಜರಾತಿ ಮತ್ತು ವೇತನ ಪಡೆದ 2 ವರ್ಷಗಳ ದಾಖಲಾತಿಗಳನ್ನು ಪರಿಗಣಿಸಲಾಗುವುದು.

10) ಕ್ಷೇಮಾಭಿವೃದ್ಧಿ/ದಿನಗೂಲಿ/ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ/ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ್ ಮತ್ತು ಕ್ಲೀನರ್ಸ್ 2 ವರ್ಷಗಳ ಮೇಲ್ಪಟ್ಟು ನಗರ ಸ್ಥಳೀಯ ಸಂಸ್ಥೆಗಳಿಂದ ವೇತನ ಪಡೆದ ದಾಖಲಾತಿಗಳನ್ನು ನೇಮಕಾತಿಯಲ್ಲಿ ಆದ್ಯತೆಗೆ ಪರಿಗಣಿಸಲಾಗುವುದು.

11) ಎರಡು ಮತ್ತು ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದ ಪಕ್ಷದಲ್ಲಿ, ಅಂತಹ ಅಭ್ಯರ್ಥಿಗಳ ಜ್ಯೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಲಾಗುವುದು ಹಾಗೂ ಹುಟ್ಟಿದ ದಿನಾಂಕ ಹಾಗೂ ಸೇವಾ ಅವಧಿ ಒಂದೇ ಆಗಿದ್ದಲ್ಲಿ ಲಾಟರಿ ಮುಖಾಂತರ ಆಯ್ಕೆ ಮಾಡಲಾಗುವುದು.

12) ನೇಮಕಾತಿ ಪ್ರಾಧಿಕಾರಿಯು ಆಯ್ಕೆ ನಿಯಮ4(2)ರಂತೆ ಪ್ರತಿಯೊಂದು ಪ್ರವರ್ಗದ ಮೀಸಲಾತಿ (ಸಮತಲ ಮತ್ತು ಲಂಬವಾದ)ಗೆ ಅನುಗುಣವಾಗಿ ಆಯ್ಕೆಯಾಗಬಹುದಾದ ಅಭ್ಯರ್ಥಿಗಳ ಶೇಕಡ 20% ಹೆಚ್ಚುವರಿ ಪಟ್ಟಿ ತಯಾರಿಸಲಾಗುವುದು.

13) ಉಪನಿಯಮ(2)ರಂತೆ ಆಯ್ಕೆಯಾಗಿರುವ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಸದರಿ ಅಭ್ಯರ್ಥಿಗೆ ಬದಲಾಗಿ ಅದೇ ಪ್ರವರ್ಗದ ಮೀಸಲಾತಿಯಲ್ಲಿ ಹೆಚ್ಚುವರಿ ಪಟ್ಟಿಯಲ್ಲಿ ಅಭ್ಯರ್ಥಿಯಾಗಿರುವ ಮತ್ತೊಬ್ಬ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು.

For more job news visit : www.kpscvaani.com

14) ಉಪನಿಯಮ(2) ಮತ್ತು (5)ರಂತೆ ತಯಾರಿಸಲಾದ ಆಯ್ಕೆ ಪಟ್ಟಿಯನ್ನು ನಗರಸಭೆ, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳಲ್ಲಿನ/ಜಿಲ್ಲಾಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

15) ನೇಮಕಾತಿ ಪ್ರಾಧಿಕಾರಿಯು ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯು ಗುರುತಿಸಲಾದ ಖಾಲಿ ಹುದ್ದೆಗಳು ಭರ್ತಿಯಾಗುವವರೆಗೆ ಅಥವಾ ಆಯ್ಕೆ ಪಟ್ಟಿಯು ಪ್ರಕಟವಾದ ಒಂದು ವರ್ಷದ ಅವಧಿಯವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.

16) ಅಭ್ಯರ್ಥಿಗಳ ನೇಮಕಾತಿಯನ್ನು ನಿಯಮ 4ರ ರೀತ್ಯಾ ಆಯ್ಕೆ ಪಟ್ಟಿಯಲ್ಲಿ ನಮೂದಿಸಲಾದ ಅಭ್ಯರ್ಥಿಗಳ ಹೆಸರು, ಅವರ ಹೆಸರಿನ ಮುಂದೆ ತೋರಿಸಲಾದ ಖಾಲಿ ಹುದ್ದೆಗಳಿಗನುಸಾರ ಎಲ್ಲಾ ರೀತಿಯಿಂದ ನೇಮಕಾತಿಗೆ ಅರ್ಹರಾಗಿದ್ದಾರೆ ಎಂಬುದನ್ನು ವಿಚಾರಣೆಯ ಮೂಲಕ ಖಚಿತಪಡಿಸಿಕೊಂಡು ನೇಮಕಾತಿ ಆದೇಶ ನೀಡಲಾಗುವುದು.

17) ನಿಯಮ 4ರ ಉಪನಿಯಮ 6ರಲ್ಲಿ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ ಮಾತ್ರಕ್ಕೆ ಅವರ ನೇಮಕಾತಿ ಹಕ್ಕು ಎಂದು ಪರಿಭಾವಿಸತಕ್ಕದ್ದಲ್ಲ.

18) ಆಯ್ಕೆಯಾಗುವ ಎಲ್ಲಾ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಕರೆದಾಗ ಜಿಲ್ಲಾಧಿಕಾರಿಗಳ ಕಛೇರಿ ಮಂಡ್ಯ ಇಲ್ಲಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

<u>ಅರ್ಜಿ ಸಲ್ಲಿಸುವ ವಿಧಾನ:</u>

ಅಧಿಸೂಚನೆಯ ಪ್ರತಿಯನ್ನು ಹಾಗೂ ನಿಗಧಿತ ಅರ್ಜಿ ನಮೂನೆಯನ್ನು ಈ ಕಾರ್ಯಾಲಯದಿಂದ ಹಾಗೂ ಸಂಬಂಧಿಸಿದ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಿಂದ ಪಡೆದು, ತಮಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡುವುದು. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಮೇಲೆ ಅಂಟಿಸಿ, ಅವರ ಮೇಲೆ ಸಹಿ ಮಾಡುವುದು ಹಾಗೂ ಅರ್ಜಿಯ ನಮೂನೆಯ ಕೊನೆಯಲ್ಲಿ ಘೋಷಣೆಯ ನಂತರ ಸಹಿ ಮಾಡುವುದು. ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆ, ವಯಸ್ಸು ಮತ್ತು ಕೋರಿರುವ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಅಧಿಕೃತ ಅಧಿಕಾರಿಗಳಿಂದ ಪಡೆದು, ಅವುಗಳ ಪ್ರತಿಗಳನ್ನು ಆಯಾ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಅರ್ಜಿಯನ್ನು ಜಿಲ್ಲಾಧಿಕಾರಿಗಳು, ಮಂಡ್ಯ ಇವರಿಗೆ ದಿನಾಂಕ: 06-06-2022 ರಂದು ಸಂಜೆ 5:30 ಗಂಟೆಯೊಳಗೆ ತಲುಪುವಂತೆ ಸಲ್ಲಿಸುವುದು. ಅರ್ಜಿಯನ್ನು ಕಳುಹಿಸುವ ಲಕೋಟೆಯ ಮೇಲೆ ಅಭ್ಯರ್ಥಿಯು ತಾವು ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ತಪ್ಪದೇ ನಮೂದಿಸುವುದು. ಸಮಯ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

For more job news visit : www.kpscvaani.com

ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:

1) ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ.
2) ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಶಾಲಾ ವರ್ಗಾವಣೆ ಪ್ರಮಾಣ ಪತ್ರ/ಜನ್ಮ ಪ್ರಮಾಣ ಪತ್ರ/ ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ/ಪಡಿತರ ಚೀಟಿ.
3) ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಹಾಲಿ ಕ್ಷೇಮಾಭಿವೃದ್ಧಿ/ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ ಆಧಾರದ ಮೇಲೆ 2 ವರ್ಷಕ್ಕಿಂತ ಕಡಿಮೆ ಇಲ್ಲದೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ದಾಖಲೆ.
4) ಕರ್ನಾಟಕ ಪುರಸಭೆಗಳ (ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿನ) ಲೋಡರ್ಸ್ ಮತ್ತು ಕ್ಲೀನರ್ಸ್ ಗಳ ನೇಮಕಾತಿ (ವಿಶೇಷ) ನಿಯಮಗಳು-2021 ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್ ಮತ್ತು ಕ್ಲೀನರ್ಸ್ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಪಡೆದ ಸೇವಾ ಪ್ರಮಾಣಪತ್ರದ ದಾಖಲೆ.
5) ಕಡಿಮೆ ವರ್ಷ ಸೇವೆ ಸಲ್ಲಿಸಿರುವವರಿಗಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿದವರಿಗೆ ಆದ್ಯತೆ ನೀಡಲಾಗುವುದು. ಈ ಬಗ್ಗೆ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಪಡೆದ ಸೇವಾ ಅವಧಿ (ವರ್ಷ ಮತ್ತು ತಿಂಗಳುಗಳಲ್ಲಿ) ಪ್ರಮಾಣ ಪತ್ರ ಲಗತ್ತಿಸುವುದು.
6) ನೇಮಕಾತಿಯಲ್ಲಿ ಆದ್ಯತೆಯನ್ನು ಕ್ಷೇಮಾಭಿವೃದ್ಧಿ/ದಿನಗೂಲಿ/ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ/ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ್ ಮತ್ತು ಕ್ಲೀನರ್ಸ್ ಬಗ್ಗೆ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ಪಡೆದ ಸೇವಾ ಪ್ರಮಾಣ ಪತ್ರ ದಾಖಲೆ ಸಲ್ಲಿಸುವುದು.
7) ಹೊರಗುತ್ತಿಗೆ ಲೋಡರ್ಸ್ ಮತ್ತು ಕ್ಲೀನರ್ಸ್ ಗಳಿಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾವತಿಸಲಾದ ಕಾರ್ಮಿಕರ ರಾಜ್ಯ ವಿಮೆ (ಇ.ಎಸ್.ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್), ಹಾಜರಾತಿ ಮತ್ತು ವೇತನ ಪಡೆದ 2 ವರ್ಷಗಳ ದಾಖಲಾತಿಗಳನ್ನು ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. (ಪ್ರತಿ ಮಾಹೆಯ ವಿವರವನ್ನು ಗುರುತಿಸಿ ಬುಕ್ ಲೆಟ್/ಸ್ಪೈರೆಲ್ ಬೈಂಡಿಂಗ್ ಮಾಡಿಸುವುದು)
8) ಕ್ಷೇಮಾಭಿವೃದ್ಧಿ/ದಿನಗೂಲಿ/ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ/ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಲೋಡರ್ಸ್ ಮತ್ತು ಕ್ಲೀನರ್ಸ್ 2 ವರ್ಷಗಳ ಮೇಲ್ಪಟ್ಟು ಕೆಲಸ ನಿರ್ವಹಿಸಿರುವ ಬಗ್ಗೆ ಪೌರಾಯುಕ್ತರು/ಮುಖ್ಯಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು.
9) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ನಮೂನೆ `ಡಿ' ಯಲ್ಲಿ ಪ್ರವರ್ಗ-1ರ ಅಭ್ಯರ್ಥಿಗಳು ನಮೂನೆ `ಇ' ಯಲ್ಲಿ ಮತ್ತು 2ಎ, 2ಬಿ, 3ಎ, ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು ನಮೂನೆ 'ಎಫ್'

For more job news visit : www.kpscvaani.com

ನಲ್ಲಿ ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆದು ಸಲ್ಲಿಸಬೇಕು.

10)ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ:08: ಸೇನೇನಿ:2001, ದಿನಾಂಕ:13-02-2021ರನ್ವಯ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 01 ರಿಂದ 10ನೇ ತರಗತಿಯೊಳಗೆ ಗ್ರಾಮೀಣ ಮೀಸಲಾತಿಗೊಳಪಡುವ ಪ್ರದೇಶಗಳಲ್ಲಿ ವ್ಯಾಸಾಂಗ ಮಾಡಿ ಉತ್ತೀರ್ಣರಾದವರು ನಿಗಧಿತ ನಮೂನೆ-2ರಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದು ಅದನ್ನು ಸಂಬಂಧಿಸಿದ ಪೌರಾಯುಕ್ತರ/ಮುಖ್ಯಾಧಿಕಾರಿಯಿಂದ ದೃಢೀಕರಿಸಿ ಸಲ್ಲಿಸಬೇಕು.

11)ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೈಮ್ ಮಾಡುವಾಗ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣ ಅಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲಸ್ಥರಕ್ಕೆ (Creamy Layer) ಸೇರಿಲ್ಲದಿರುವ ಬಗ್ಗೆ ನಮೂನೆ-1ರಲ್ಲಿ ಪಡೆದಿರುವ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರತಕ್ಕದ್ದಾಗಿದ್ದು, ಅಭ್ಯರ್ಥಿಯು ಅರ್ಜಿಯೊಡನೆ ಲಗತ್ತಿಸತಕ್ಕದ್ದು. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.

12) ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರಿ ಆದಿಸೂಚನೆ ಸಂಖ್ಯೆ:ಸಿಆಸುಇ/71/ ಸೆನೆನಿ/2001, ದಿನಾಂಕ:24-10-2002ರನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ಮೊಹರು ಮತ್ತು ಜಾರಿ ಮಾಡಿದ ದಿನಾಂಕದೊಂದಿಗೆ ನಿಗದಿತ ನಮೂನೆಯಲ್ಲಿ ಪಡೆದಿಟ್ಟುಕೊಂಡು ಅರ್ಜಿಯೊಡನೆ ಸಲ್ಲಿಸತಕ್ಕದ್ದು.

13)ಅಂಗವಿಕಲ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣ ಪತ್ರವನ್ನು ದಿನಾಂಕ: 19-11-2005ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ:115:ಸೇನನಿ:2005ರಲ್ಲಿ ನಿಗಧಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ. ಸರ್ಕಾರದ ಆದೇಶ ಸಂಖ್ಯೆ:ಮಮಇ/65/ ಪಿಹೆಚ್ /2010, ದಿನಾಂಕ:18-02-2011ರಂತೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

14)ಯೋಜನಾ ನಿರಾಶ್ರಿತ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ: 44:ಸೇನನಿ:2001ರ ದಿನಾಂಕ:27-07-2001ರಲ್ಲಿ ನಿಗಧಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದ ತಹಶೀಲ್ದಾರರಿಂದ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

For more job news visit : www.kpscvaani.com

15) ಮಾಜಿ ಸೈನಿಕ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ್ದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತ್ಯ ಸೇವೆಯ (1) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಪಿಂಚಣಿದಾರರು. (2) ಮಿಲಿಟರಿ ಸೇವೆಯಿಂದ ಉಂಟಾದ ದೈಹಿಕ ಅಸಮರ್ಥ್ಯತೆ ಹೊಂದಿಬಿಡುಗಡೆಯಾದ ವ್ಯಕ್ತಿ. (3) ಗ್ಯಾಲಂಟ್ರಿ ಪುರಸ್ಕೃತ ವಿಜೇತರು ಬಗೆಗಿನ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸತಕ್ಕದ್ದು.

16) ತೃತೀತ ಲಿಂಗದ ಅಭ್ಯರ್ಥಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ/179/ಸೆನೆನಿ/2020 ದಿನಾಂಕ: 06-07-2021ರಲ್ಲಿ ರಾಜ್ಯ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಿಂದ ಲೇಕಡ 1 (ಒಂದರಷ್ಟು) ರಷ್ಟು ಹುದ್ದೆಗಳನ್ನು ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಮೀಸಲಾತಿ ಕಲ್ಪಿಸಿದ್ದು, ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಮೀಸಲಿಸಿರಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಕೇಂದ್ರ ಅಧಿನಿಯಮ ತೃತೀಯ ಲಿಂಗ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) 2019ರಲ್ಲಿ ನಿಗಧಿಪಡಿಸಿರುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರಿಂದ ಪ್ರಮಾಣ ಪತ್ರವನ್ನು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಪಡೆದಿಟ್ಟುಕೊಂಡು ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು, ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

ವಿಶೇಷ ಸೂಚನೆಗಳು:-

- ಅರ್ಜಿಯೊಂದಿಗೆ ಲಗತ್ತಿಸುವ ಎಲ್ಲಾ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದು ಲಗತ್ತಿಸಿರಬೇಕು ಮತ್ತು ಕಡ್ಡಾಯವಾಗಿ ಪೌರಾಯುಕ್ತರು/ಮುಖ್ಯಾಧಿಕಾರಿಯಿಂದ ದೃಢೀಕರಿಸಿರಬೇಕು.
- ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಯ ಖಾಯಂ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಬೇಕು. ಒಂದು ವೇಳೆ ಅಭ್ಯರ್ಥಿಯ ವಿಳಾಸ ಬದಲಾವಣೆಯಾದಲ್ಲಿ ತಕ್ಷಣವೇ ಈ ಕಚೇರಿಗೆ ಮಾಹಿತಿ ತಿಳಿಸಬೇಕು. ತಪ್ಪಿದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರು.
- ಅಭ್ಯರ್ಥಿಗಳು ಈ ನೇಮಕಾತಿ ಪ್ರಾಧಿಕಾರ (ಜಿಲ್ಲಾಧಿಕಾರಿಗಳು ಮಂಡ್ಯ) ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿಯೇ ಅರ್ಜಿಗಳನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಈ ಅಧಿಸೂಚನೆಯು ಚಾಲ್ತಿಯಲ್ಲಿರುವ ಮತ್ತು ಕಾಲ-ಕಾಲಕ್ಕೆ ಸರ್ಕಾರದಿಂದ ಹೊರಡಿಸಲ್ಪಡುವ ಆದೇಶಗಳಿಗೆ ಒಳಪಟ್ಟಿರುತ್ತದೆ.
- ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ದಿನಾಂಕವು ಸಾರ್ವಜನಿಕ ರಜೆಯಾಗಿದ್ದರೆ ಮುಂದಿನ ಕಚೇರಿ ಕೆಲಸದ ದಿನ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ ಎಂದು ತಿಳಿಯುವುದು.
- ಈ ಮೇಲಿನ ಸೂಚನೆಗಳಿಗೆ ಅನುಸಾರವಾಗಿ ದಾಖಲೆಗಳನ್ನು ಒದಗಿಸಲು ತಪ್ಪಿದಲ್ಲಿ ಅಂತಹ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.

R.N.I. No. KARBIL/2001/47147 POSTAL REGN. No. PNP/KA/BGS/2202/2017-19
Licensed to post without prepayment WPP No. 297
For more job news visit : www.kpscvaani.com

- ಅಭ್ಯರ್ಥಿಯು ನಕಲಿ ಅಭ್ಯರ್ಥಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತಾವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗೆ ನಡೆಸಲಾದ ಪರಿಶೀಲನೆ ಪ್ರಕ್ರಿಯೆಗಳ ಸಂದರ್ಭಗಳಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿ ಸಂಬಂಧದಲ್ಲಿ ಯಾವುದೇ ಇತರೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಭಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೇ, ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಸಹಿ/-

ಸ್ಥಳ: ಮಂಡ್ಯ ಜಿಲ್ಲಾಧಿಕಾರಿ

ದಿನಾಂಕ:06-05-2022 ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ

ಮಂಡ್ಯ ಜಿಲ್ಲೆ, ಮಂಡ್ಯ.

PR-195

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.